ಬಳಕೆ ಮಾಡಬಹುದಾ? ನೈತಿಕತೆ ಇಲ್ಲ ಎಂಬ ಶಬ್ದವನ್ನು ಪ್ರಯೋಗ.... can he use that word?

(ಗೊಂದಲ)

**ಮಾನ್ಯ ಸದಸ್ಯರೊಬ್ಬರು:** ಅವರು ಕ್ಷಮೆ ಕೇಳಬೇಕು.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ವಿಧಾನಸೌಧದ ಸುತ್ತಾ ಇಷ್ಟೊಂದು ಪೊಲೀಸಿನವರ ಕಾವಲನ್ನು ಹಾಕಿಸಿದ್ದಿರೇಕೆ? ಏನು ನಾವೇನು ಟೆರರಿಸ್ಟಾ? ಏನು ಸಾವಿರಾರು ಪೊಲೀಸಿನವರು ವಿಧಾನಸೌಧದ ಸುತ್ತ ಸುತ್ತುತ್ತಿದ್ದಾರೆ, ಬಾಂಬ್ ಬೆದರಿಕೆಗಳೇನಾದರೂ ಇದೆಯಾ ಇಲ್ಲಿ? ತುರ್ತು ಪರಸ್ಥಿತಿಯಲ್ಲೂ ಕೂಡ ನಾನು ಇಷ್ಟೊಂದು ಪೊಲೀಸರನ್ನು ಕಂಡಿರಲಿಲ್ಲ.

**ಅಧ್ಯಕ್ಷರು:** ವಿಧಾನಸೌಧದ ಹೊರಗಿನದು ನನ್ನ ವ್ಯಾಪ್ತಿಗೆ ಬರುವುದಿಲ್ಲ, ಹೊರಗಡೆಯದನ್ನು ನಾನು ಕೇಳುವ ಹಾಗಿಲ್ಲ.... you ask the Government.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನೂರಾರು, ಸಾವಿರಾರು ಪೊಲೀಸಿನವರು ವಿಧಾನ ಸೌಧದ ಸುತ್ತಮುತ್ತ ಇದ್ದಾರೆ, ಇವತ್ತು ನಮಗೆ ತುರ್ತು ಪರಿಸ್ಥಿತಿ ಜ್ಞಾಪಕಕ್ಕೆ ಬರುತ್ತಿದೆ, ಅಘೋಷಿತ ತುರ್ತು ಪರಿಸ್ಥಿತಿಯನ್ನು ಹೇರಲಾಗಿದೆ, ಇಲ್ಲಿ ಯಾರಾದರೂ ಭಯೋತ್ಪಾದಕರಿದ್ದಾರೆಯೇ ಅಥವಾ ಭಯೋತ್ಪಾದಕರ ಭಯವಿದೆಯಾ ಎಂಬುದನ್ನು ಸದನಕ್ಕೆ ತಿಳಿಸಬೇಕು. ಏಕೆ ಪೊಲೀಸಿನವರಿದ್ದಾರೆ? ಇದೇನು ಪ್ರಜಾಪ್ರಭುತ್ವವೇ? ಇದು ಪ್ರಜಾಪ್ರಭುತ್ವದ ನಡವಳಿಕೆಯೇ? ನಮ್ಮ ಕಾರನ್ನು ಚೆಕ್ ಮಾಡಿ ನಾವು ಒಳಗಡೆ ಬರುವುದಕ್ಕೆ ಅರ್ಧಗಂಟೆಯಾಗುತ್ತದೆ, ಇಲ್ಲಿ ಪೊಲೀಸ್ ರಾಜ್ಯವಾಗಿದೆ. ದಯಮಾಡಿ ನೀವು ಅಜೆಂಡಾವನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚಿತವಾಗಿ ನೀವು ನಮಗೆ ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ನಾವು ಸದನದ ಬಾವಿಯಲ್ಲಿದ್ದು ಧರಣಿ ಮಾಡುತ್ತಿರುವಾಗ ಬಿಲ್‌ಗಳನ್ನೆಲ್ಲಾ ಪಾಸ್ ಮಾಡಿಕೊಳ್ಳುತ್ತಿದ್ದಿರಿ, ಇದನ್ನು ಪ್ರಜಾಪ್ರಭುತ್ವವೆಂದು ಕರೆಯಬೇಕಾ? ಸಂಸದೀಯ ನಡವಳಿಕೆ ಎಂದು ಕರೆಯಬೇಕಾ? ಪ್ರಜಾಪ್ರಭುತ್ವದ ಕಗ್ಗೊಲೆಯಲ್ಲವೇ? ಸಂಸದೀಯ ವ್ಯವಸ್ಥೆಗೆ ಇದೊಂದು ದೊಡ್ಡ ಅಗೌರವವಲ್ಲವೇ? ಮಾರಕವಲ್ಲವೇ?

**ಅಧ್ಯಕ್ಷರು:** ಈ ಸಮಸ್ಯೆ ಇತ್ಯರ್ಥ ಮಾಡೋಣ ಮಾತುಕತೆಗೆ ಬನ್ನಿ ಎಂದು ನಾನು ಕರೆದರೆ, ನೀವು ಬರುವುದಿಲ್ಲ. ಸದನದಿಂದ ಹೊರಗೆ ಬಂದು ಚರ್ಚೆ ಮಾಡೋಣವೆಂದರೆ ಅದಕ್ಕೂ ಬರುವುದಿಲ್ಲ, ನೀವು ಬಿಎಸಿಗೆ ಬನ್ನಿ ಎಂದರೆ ಅಲ್ಲಿಗೂ ಬರುವುದಿಲ್ಲ. How to solve this?

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನಮಗೆ ಮಾತನಾಡುವುದಕ್ಕೆ ಬಿಡದ್ದಿದ್ದರೆ ಏನು ಮಾಡಬೇಕು? ಒಂದು ಲಕ್ಷ ಕೋಟಿ, ಒಂದು ಲಕ್ಷ ಕೋಟಿ ಈ ಸರ್ಕಾರದಿಂದ ಲೂಟಿಯಾಗಿದೆ. ನಿಯಮ 60 ನಮಗಿರುವ ವೆಪನ್, ಒಂದು ಲಕ್ಷ ಕೋಟಿ ಲೂಟಿಯಾಗಿದೆ, ಯಡಿಯೂರಪ್ಪನವರ ಸರ್ಕಾರ ರಾಜೀನಾಮೆ ಕೊಡಬೇಕು.

**ಅಧ್ಯಕ್ಷರು:** That is different issue ಈಗ ನಾನು ಸದನ ನಡೆಸಬೇಕಾದರೆ ತಮ್ಮನ್ನು ಸಭೆಗೆ ಕರೆದರೆ ತಾವು ಬರುವುದಿಲ್ಲ. Then how to solve? ಇಲ್ಲದಿದ್ದರೆ, ನೀವು, ಸರ್ಕಾರ ಕುಳಿತುಕೊಂಡು ಮಾತನಾಡಿಕೊಳ್ಳಬೇಕು.

**ಶ್ರೀ ಸಿದ್ದರಾಮಯ್ಯ:** ಅವರಿಗೆ ಯಾವುದೇ ರೀತಿಯ ನೈತಿಕ ಅಧಿಕಾರ ಇಲ್ಲ, ರಾಜೀನಾಮೆ ಕೊಡಬೇಕು, ಸಿ.ಬಿ.ಐ.ಗೆ ವಹಿಸಬೇಕು, ಅವರು ಸರ್ಕಾರದಲ್ಲಿ. ಇಲ್ಲದಿದ್ದರೆ, ಅವರು ಸರ್ಕಾರದಲ್ಲಿರುವುದಕ್ಕಾಗುವುದಿಲ್ಲ, ಅಸೆಂಬ್ಲಿ ನಡೆಸುವುದಕ್ಕಾಗುವುದಿಲ್ಲ.

**ಅಧ್ಯಕ್ಷರು:** That is different issue. ನಾನು ಸದನ ನಡೆಸುವುಕ್ಕೆ ಬಿಎಸಿ ಕರೆದಿದ್ದೆ, ನೀವು ಅದಕ್ಕೂ ಬಹಿಷ್ಕಾರ ಮಾಡಿದ್ದೀರಿ, first time in the history ಏಕೆ ಬಹಿಷ್ಕಾರ ಮಾಡಿದ್ದೀರಿ?

**ಶ್ರೀ ಸಿದ್ದರಾಮಯ್ಯ:** ಒಂದು ಸಾರಿಯಾದರೂ ನಮ್ಮನ್ನು ಕರೆದು ಮಾತನಾಡಿದ್ದೀರಾ?

**ಅಧ್ಯಕ್ಷರು:** ನೀವು ಬಿಎಸಿಗೆ ಏತಕ್ಕೆ ಬರಲಿಲ್ಲ, ನಿಮ್ಮಿಂದ ಉತ್ತರವೇ ಇಲ್ಲ, ನೀವು ಬಿಎಸಿಗೆ ಏತಕ್ಕೆ ಬರಲಿಲ್ಲವೆನ್ನುವುದಕ್ಕೆ ಉತ್ತರ ಹೇಳಿ, ನಿಮ್ಮಿಂದ ಅದಕ್ಕೆ ಉತ್ತರವಿಲ್ಲ, ನೀವು ಮಾಡುವುದು ಸರಿ, ಬೇರೆಯವರು ಮಾಡುವುದು ತಪ್ಪೆಂದರೆ ಸದನ ನಡೆಸುವುದಕ್ಕಾಗುವುದಿಲ್ಲ

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇದು ಸರ್ವಾಧಿಕಾರವೇ, ಪ್ರಜಾಪ್ರಭುತ್ವ ಉಳಿಯುತ್ತದೆಯೇ? ಸಂಸದೀಯ ವ್ಯವಸ್ಥೆ ಉಳಿಯುತ್ತದೆಯೇ? It is a murder of democracy. ಬಿಎಸಿನಲ್ಲಿ ನಿರ್ಣಯವಾಗುವುದು ಒಂದು ಇಲ್ಲಿಯವರೆಗೆ ಇಂಪ್ಲಿಮೆಂಟ್ ಆಗಿದೆಯಾ?

**ಅಧ್ಯಕ್ಷರು:** ಅದನ್ನು ಅಲ್ಲಿ ಹೇಳಬಹುದಿತ್ತಲ್ಲಾ? ಆಮೇಲೆ ಕರೆದರೂ ನೀವು ಬರಲಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನನ್ನನ್ನು ಸೌಜನ್ಯಕ್ಕಾದರೂ ಕರೆದಿರಾ?

**ಅಧ್ಯಕ್ಷರು:** ನಾನು ಅದನ್ನು ಕೇಳುವುದಕ್ಕಾಗುವುದಿಲ್ಲ, ಯಾರು ಹೇಳಿ ಕಳುಹಿಸಿದರು ಸಭೆಗೆ ಬರುವುದಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಬಿಎಸಿನಲ್ಲಿ ತೆಗೆದುಕೊಂಡಂಥ ಒಂದೇ ಒಂದು ನಿರ್ಣಯ ಜಾರಿಯಾಗುವುದಿಲ್ಲ, ಅಲ್ಲಿಗೆ ಏಕೆ ಬರಬೇಕು?

**ಅಧ್ಯಕ್ಷರು:** ಮತ್ತೆ ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಸಿದ್ದರಾಮಯ್ಯ:** ನಾವು ಏಕೆ ಇರಬೇಕು? Why we should be Members here?

**ಅಧ್ಯಕ್ಷರು:** ನೀವು ನಿಮ್ಮದೇ ನಿರ್ಣಯ ತೆಗೆದುಕೊಂಡರೆ, ನಾನು ನನ್ನ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ, ಸರ್ಕಾರ ಮತ್ತು ನಿಮ್ಮ ನಡುವಿನ dispute ಅನ್ನು you have to solve it.

(ಗೊಂದಲ)

**ಅಧ್ಯಕ್ಷರು:** ಈಗ ನಾನು ಎಲ್ಲರಲ್ಲೂ ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಮತ್ತೆ ಮತ್ತೆ ವಿನಂತಿ ಮಾಡುತ್ತೇನೆ. ನಾನು ಕಲಾಪವನ್ನು ಪ್ರಾರಂಭಿಸುತ್ತೇನೆ.

**ಅಧ್ಯಕ್ಷರು:** ಈಗ ಪ್ರಶ್ನೋತ್ತರ.

(ಗೊಂದಲ)